SL. No. : TTTT

ಒಟ್ಟು ಪ್ರಶ್ನೆಗಳ ಸಂಖ್ಯೆ : 57 ]
Total No. of Questions : 57 ]

**CCE PF**
**CCE PR**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8
[ Total No. of Printed Pages : 8

**ಸಂಕೇತ ಸಂಖ್ಯೆ : 95-K** **Code No. : 95-K**

# ವಿಷಯ : ಸಮಾಜಶಾಸ್ತ್ರ
# Subject : SOCIOLOGY

**(ಕನ್ನಡ ಭಾಷಾಂತರ / Kannada Version)**

**(ಹೊಸ ಪಠ್ಯಕ್ರಮ / New Syllabus)**

**(ಖಾಸಗಿ ಅಭ್ಯರ್ಥಿ & ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Fresh & Private Repeater)**

ದಿನಾಂಕ : 26. 03. 2018 ] [ Date : 26. 03. 2018

ಸಮಯ : ಬೆಳಿಗ್ಗೆ 9-30 ರಿಂದ ಮಧ್ಯಾಹ್ನ 12-45 ರವರೆಗೆ ] [ Time : 9-30 A.M. to 12-45 P.M.

ಗರಿಷ ಅಂಕಗಳು : 100 ] [ Max. Marks : 100

## *ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :*

1. ಈ ಪ್ರಶ್ನೆಪತ್ರಿಕೆಯು 57 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ಕೊಡಲಾಗಿದೆ.

ಇಲ್ಲಿ ಕತ್ತರಿಸಿ

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**

I. **ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ :** $10 \times 1 = 10$

1. ಸಾಮಾಜಿಕ ಬದಲಾವಣೆಯನ್ನು ತರುವ ಅತ್ಯಂತ ಪ್ರಭಾವಶಾಲಿ ಮಾಧ್ಯಮ

(A) ದೂರವಾಣಿ

(B) ದೂರದರ್ಶನ

(C) ಶಿಕ್ಷಣ

(D) ಸಮಾಜ

2. ನಿಯೋಜಿತ ಬದಲಾವಣೆಗೆ ಉದಾಹರಣೆಯಾಗಿದೆ

(A) ಅತಿವೃಷ್ಟಿಯಿಂದ ಬಡತನ

(B) ಸಾಂಕ್ರಾಮಿಕ ರೋಗದಿಂದ ವಲಸೆ

(C) ಶಿಕ್ಷಣದಿಂದ ಅಭಿವೃದ್ಧಿ

(D) ಕಡಲ ಕೊರೆತದಿಂದ ವಲಸೆ

3. ನಗರಗಳೆಡೆಗೆ ವಲಸೆ ಹೋಗುವುದು ಮುಖ್ಯವಾಗಿ

(A) ವಾಸಸ್ಥಳಗಳನ್ನು ಅರಸಲು

(B) ನೀರನ್ನು ಅರಸಲು

(C) ಅನುಕೂಲಕರ ಹವಾಮಾನ ಅರಸುತ್ತ

(D) ಉದ್ಯೋಗವನ್ನು ಅರಸಲು

4. ಬೌದ್ಧ ಧರ್ಮದ ಸ್ಥಾಪಕ

(A) ಮಹಾವೀರ

(B) ವೃಷಭನಾಥ

(C) ಗೌತಮ ಬುದ್ಧ

(D) ತೀರ್ಥಂಕರ

5. ಭಾರತದ ನವೋದಯದ ಪಿತಾಮಹ

   (A) ದಯಾನಂದ ಸರಸ್ವತಿ

   (B) ರಾಜಾ ರಾಮ್‌ಮೋಹನ್ ರಾಯ್

   (C) ಜ್ಯೋತಿಭಾ ಫುಲೆ

   (D) ಮಹಾತ್ಮ ಗಾಂಧೀಜಿ

6. ಮನುಸ್ಮೃತಿಯನ್ನು ರಚಿಸಿದವರು

   (A) ಯಜ್ಞವಲ್ಕ್ಯ

   (B) ಪರಾಶರ

   (C) ವೇದವ್ಯಾಸ

   (D) ಮನು

7. ಹಂಟರ್ ಆಯೋಗವು ಪ್ರಾಮುಖ್ಯತೆ ನೀಡಿದ್ದು

   (A) ಮಹಿಳಾ ಶಿಕ್ಷಣಕ್ಕೆ

   (B) ಶಿಕ್ಷಕಿಯರ ನೇಮಕಕ್ಕೆ

   (C) ಮಹಿಳೆಯರ ಸಬಲೀಕರಣಕ್ಕೆ

   (D) ಮಹಿಳೆಯರಿಗೆ ಪ್ರತ್ಯೇಕ ವಿಶ್ವವಿದ್ಯಾನಿಲಯ ಸ್ಥಾಪಿಸಲು

8. ಸಾಮಾನ್ಯವಾಗಿ ಒಂದು ಪ್ರದೇಶದ ಮೂಲ ನಿವಾಸಿಗಳನ್ನು ಕರೆಯುವುದು

   (A) ಬುಡಕಟ್ಟು ಜನರು

   (B) ಹರಿಜನರು

   (C) ಗಿರಿಜನರು

   (D) ಆದಿವಾಸಿಗಳು

9. ಇತ್ತೀಚಿನ ದಿನಗಳಲ್ಲಿ ರೇಡಿಯೋ ಬಳಕೆಯು ಹೆಚ್ಚು ಪ್ರಾಧಾನ್ಯತೆ ಪಡೆಯಲು ಕಾರಣ

   (A) ಎಫ್.ಎಂ. ಸ್ಟೇಷನ್‌ಗಳು

   (B) ಮೊಬೈಲ್ ಫೋನ್‌ಗಳು

   (C) ಅಂತರ್ಜಾಲ

   (D) ಫ್ಯಾಕ್ಸ್

10. 'ಹರಿಜನ' ವೃತ್ತಪತ್ರಿಕೆಯನ್ನು ಪ್ರಕಟಿಸಿದವರು

   (A) ಬಾಲಗಂಗಾಧರ್ ತಿಲಕ್

   (B) ರಾಜಾ ರಾಮ್‌ಮೋಹನ್ ರಾಯ್

   (C) ಡಾ॥ ಬಿ.ಆರ್. ಅಂಬೇಡ್ಕರ್

   (D) ಗಾಂಧೀಜಿ

II. **ಈ ಕೆಳಗಿನ ಪ್ರಶ್ನೆಗಳಿಗೆ *ಒಂದೊಂದು* ವಾಕ್ಯದಲ್ಲಿ ಉತ್ತರ ಬರೆಯಿರಿ :** $14 \times 1 = 14$

11. ಕೈಗಾರಿಕೀಕರಣ ಎಂದರೇನು ?

12. ರಷ್ಯಾದ ಕ್ರಾಂತಿಗೆ ಯಾರ ತತ್ವ ಪ್ರೇರಕವಾಯಿತು ?

13. ಅನಿಯೋಜಿತ ಸಾಮಾಜಿಕ ಬದಲಾವಣೆ ಎಂದರೇನು ?

14. ಆರ್ಥಿಕ ಅಸಮಾನತೆ ಎಂದರೇನು ?

15. 'ಕಾಸ್ಟ್ ಅಂಡ್ ರೇಸ್ ಇನ್ ಇಂಡಿಯಾ' ಎಂಬ ಪುಸ್ತಕದ ಲೇಖಕರು ಯಾರು ?

16. ಬರ್ದೋಲಿ ಸತ್ಯಾಗ್ರಹದ ನಾಯಕರು ಯಾರು ?

17. ಫ್ರೆಂಚ್ ಮಹಾಕ್ರಾಂತಿಯ ಪ್ರಮುಖ ಧ್ಯೇಯಗಳು ಯಾವುವು ?

18. ಸತಿ ಸಹಗಮನ ಪದ್ಧತಿ ಎಂದರೇನು ?

19. ಭಾರತದ ಮೊದಲ ಮಹಿಳಾ ಪ್ರಧಾನ ಮಂತ್ರಿ ಯಾರು ?

20. ಆಂಗ್ಲರ ವಿರುದ್ಧ ಹೋರಾಡಿದ ಭಾರತೀಯ ರಾಣಿಯರನ್ನು ಹೆಸರಿಸಿ.

21. ಗಾಂಧೀಜಿಯವರು ಆದಿವಾಸಿಗಳನ್ನು ಏನೆಂದು ಕರೆದಿದ್ದಾರೆ ?

22. ವೆರಿಯರ್ ಎಲ್ವಿನ್‌ರವರು ಬುಡಕಟ್ಟುಗಳ ಅಭಿವೃದ್ಧಿ ಪ್ರತ್ಯೇಕವಾಗಿಡಬೇಕು ಎನ್ನಲು ಕಾರಣವೇನು ?

23. ವಯಸ್ಕರ ಶಿಕ್ಷಣ ಎಂದರೇನು ?

24. ಭಾರತದ 'ಸಿಲಿಕಾನ್ ಸಿಟಿ' ಎಂದು ಪ್ರಖ್ಯಾತಿ ಪಡೆದಿರುವ ನಗರ ಯಾವುದು ?

III. **ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ಮೂರು ವಾಕ್ಯಗಳಲ್ಲಿ ಉತ್ತರಿಸಿ :** $25 \times 2 = 50$

25. ಸಂಪರ್ಕ ಸಾಧನದ ಬೆಳವಣಿಗೆ ವಿಶ್ವದ ಗಾತ್ರವನ್ನು ಕುಗ್ಗಿಸಿದೆ. ಹೇಗೆ ?

26. ವೈಜ್ಞಾನಿಕ ಮನೋಭಾವನೆ ಬೆಳೆಸುವಲ್ಲಿ ಶಿಕ್ಷಣದ ಪಾತ್ರ ಮಹತ್ವದ್ದಾಗಿದೆ. ಹೇಗೆ ?

27. ಮಾನವ ವಲಸೆಯ ಹೆಚ್ಚಳಕ್ಕೆ ಕಾರಣವಾದ ಅಂಶಗಳು ಯಾವುವು ?

28. ಪಕ್ಕಾ ಮತು ಕಚ್ಚಾ ಆಹಾರಗಳ ನಡುವಿನ ವ್ಯತ್ಯಾಸಗಳೇನು ?

29. 'ಜಾತಿ' ಪದದ ಅರ್ಥವೇನು ?

30. ಭಾರತದ ಪ್ರಮುಖ ಸಾಮಾಜಿಕ ಸುಧಾರಣಾ ಚಳುವಳಿಗಳ ವಿಧಗಳನ್ನು ತಿಳಿಸಿ.

31. ಸಾಮಾಜಿಕ ಚಳುವಳಿಯ ಉದ್ದೇಶಗಳೇನು ?

32. ಭಾರತದ ಸಾಮಾಜಿಕ–ಧಾರ್ಮಿಕ ಸುಧಾರಣ ಚಳುವಳಿಯ ಪ್ರಮುಖ ನಾಯಕರುಗಳನ್ನು ಹೆಸರಿಸಿ.

33. ಮಧ್ಯಯುಗೀನ ಭಾರತದ ಮುಸ್ಲಿಂ ಆಳ್ವಿಕೆಯ ಕಾಲದಲ್ಲಿ ಮಹಿಳೆಯರ ಸ್ಥಾನಮಾನ ಅಧೋಗತಿಗೆ ಇಳಿಯಿತು. ಏಕೆ ?

34. ಬ್ರಿಟಿಷರ ವಿರುದ್ಧ ಹೋರಾಡುವಂತೆ ಮಹಿಳೆಯರನ್ನು ಪ್ರೋತ್ಸಾಹಿಸಿದ ಮಹಿಳಾ ನಾಯಕರನ್ನು ಹೆಸರಿಸಿ.

35. ಬುಡಕಟ್ಟು ಎಂದರೇನು ?

36. ಬುಡಕಟ್ಟು ಸಂಸ್ಕೃತಿ ಮತ್ತು ಅವರ ಸಾಂಪ್ರದಾಯಿಕ ತಂತ್ರಜ್ಞಾನವನ್ನು ರಕ್ಷಿಸುವುದು ಅನಿವಾರ್ಯ. ಏಕೆ ?

37. ಭಾರತದಲ್ಲಿ ವೃತ್ತಪತ್ರಿಕೆಗಳ ಬೆಳವಣಿಗೆಯನ್ನು ಕುರಿತು ಒಂದು ಟಿಪ್ಪಣಿ ಬರೆಯಿರಿ.

38. ಸಮೂಹ ಮಾಧ್ಯಮಗಳು ಬೀರುವ ದುಷ್ಪರಿಣಾಮಗಳಾವುವು ?

39. ಭಾರತದಲ್ಲಿ ಟೆಲಿವಿಷನ್‌ನ ಬೆಳವಣಿಗೆಯನ್ನು ಕುರಿತು ಬರೆಯಿರಿ.

40. ತಂತ್ರಜ್ಞಾನವು ವ್ಯವಸಾಯದಲ್ಲಿ ಹೇಗೆ ಬದಲಾವಣೆ ತಂದಿದೆ ?

41. ಕಿಂಗ್ಸ್‌ಲೇ ಡೇವಿಸ್‌ನ ಪ್ರಕಾರ ಸಾಮಾಜಿಕ ಬದಲಾವಣೆಯನ್ನು ವ್ಯಾಖ್ಯಾನಿಸಿ.

42. ಸಾಮಾಜಿಕ ಬದಲಾವಣೆಗೆ ತೊಡಕುಗಳಾವುವು ?

43. ಜಾತಿಯ ಗುಣಲಕ್ಷಣಗಳೇನು ?

44. ಸಮಾಜ ಸುಧಾರಣೆಯಲ್ಲಿ ಕಬೀರ್ ಪಂಥದ ಪ್ರಮುಖ ಅಂಶಗಳೇನು ?

45. ಭಾರತದ ವೇದಗಳ ಕಾಲದಲ್ಲಿ ಮಹಿಳೆಯರು ಪುರುಷರಷ್ಟೇ ಪ್ರಖ್ಯಾತರಾಗಿದ್ದವರನ್ನು ಹೆಸರಿಸಿ.

46. ಮಹಿಳೆಯರ ಸ್ಥಾನಮಾನ ಉತ್ತಮಪಡಿಸಲು ಮಹರ್ಷಿ ಕಾರ್ವೆಯವರ ಕೊಡುಗೆ ಏನು ?

47. ನಮ್ಮ ಸಂವಿಧಾನವು ಮಹಿಳೆಯರ ಸ್ಥಾನಮಾನಕ್ಕೆ ಸಹಕಾರಿಯಾಗಿದೆ ಹೇಗೆ ?

48. ನಮ್ಮ ಸಂವಿಧಾನದ 46 ನೇ ಅನುಚ್ಛೇದ ಏನನ್ನು ಸೂಚಿಸುತ್ತದೆ ?

49. ನಾಲ್ಕನೆ ಪಂಚವಾರ್ಷಿಕ ಯೋಜನೆಯು ಬಡಕಟ್ಟು ಜನಾಂಗದ ಅಭಿವೃದ್ಧಿಗೆ ಹೇಗೆ ಸಹಕಾರಿಯಾಯಿತು ?

IV. **ಈ ಕೆಳಗಿನ ಪ್ರಶ್ನೆಗಳಿಗೆ *ಮೂರರಿಂದ ಆರು* ವಾಕ್ಯಗಳಲ್ಲಿ ಉತ್ತರಿಸಿ :** $6 \times 3 = 18$

50. ಸಾಮಾಜಿಕ ಬದಲಾವಣೆಯ ಲಕ್ಷಣಗಳೇನು ?

***ಅಥವಾ***

ಸಾಮಾಜಿಕ ಬದಲಾವಣೆಯ ಪ್ರೇರಕಾಂಶಗಳಾವುವು ?

51. ನಗರೀಕರಣದಿಂದಾಗಿ ಜಾತಿ ಪದ್ಧತಿಯು ಭಾರತದಲ್ಲಿ ಬದಲಾಗುತ್ತಿದೆ. ಹೇಗೆ ?

***ಅಥವಾ***

ಸಾಮಾಜಿಕ ಬದಲಾವಣೆಗೆ ಜಾತಿ ಅಡ್ಡಿಯಾಗಿದೆ. ಹೇಗೆ ?

52. ಪ್ರಾರ್ಥನಾ ಸಮಾಜದ ಬಗ್ಗೆ ಒಂದು ಟಿಪ್ಪಣಿ ಬರೆಯಿರಿ.

***ಅಥವಾ***

ಆರ್ಯ ಸಮಾಜದ ಬಗ್ಗೆ ಒಂದು ಟಿಪ್ಪಣಿ ಬರೆಯಿರಿ.

53. ಭಾರತದಲ್ಲಿ ಬ್ರಿಟಿಷ್ ಆಡಳಿತ ಕಾಲದಲ್ಲಿ ಮಹಿಳೆಯರ ಜಾಗೃತಿ ಹಾಗೂ ಪ್ರಗತಿಗಾಗಿ ಶ್ರಮವಹಿಸಿದ ಮಹಿಳಾ ಸಂಘಟನೆಗಳನ್ನು ಹೆಸರಿಸಿ.

***ಅಥವಾ***

ಭಾರತದಲ್ಲಿ ಬ್ರಿಟಿಷ್ ಆಡಳಿತ ಕಾಲದಲ್ಲಿ ಮಹಿಳೆಯರ ಸ್ಥಾನಮಾನ ಉತ್ತಮಪಡಿಸಲು ಜಾರಿಗೆ ತಂದ ಕಾಯ್ದೆ (ಕಾನೂನು)ಗಳನ್ನು ಹೆಸರಿಸಿ.

54. ಭಾರತದ ಬುಡಕಟ್ಟುಗಳಲ್ಲಿ ಆಗುತ್ತಿರುವ ಸಾಮಾಜಿಕ ಬದಲಾವಣೆಯನ್ನು ವಿವರಿಸಿ.

***ಅಥವಾ***

ಭಾರತದ ಬುಡಕಟ್ಟುಗಳ ಐತಿಹಾಸಿಕ ಹಿನ್ನೆಲೆಯನ್ನು ವಿವರಿಸಿ.

55. ಚಲನಚಿತ್ರಗಳು ಸಾಮಾಜಿಕ ಮೌಲ್ಯಗಳನ್ನು ಹೇಗೆ ಪ್ರತಿಬಿಂಬಿಸುತ್ತವೆ ? ವಿವರಿಸಿ.

***ಅಥವಾ***

ಗಣಕಯಂತ್ರಗಳು ಆಧುನಿಕ ಜೀವನದಲ್ಲಿ ಹೇಗೆ ಉಪಯುಕ್ತವಾಗಿದೆ ? ವಿವರಿಸಿ.

V. **ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ವಾಕ್ಯಗಳಲ್ಲಿ ಉತ್ತರಿಸಿ :** $2 \times 4 = 8$

56. ಪ್ರಾದೇಶಿಕ ಅಸಮತೋಲನದ ಮೇಲೆ ಪ್ರಭಾವಬೀರುವ ಅಂಶಗಳು ಯಾವುವು ?

57. ಆಧುನಿಕ ಸ್ವತಂತ್ರ ಭಾರತದಲ್ಲಿ ಜಾತಿ ವ್ಯವಸ್ಥೆಯಲ್ಲಾಗುತ್ತಿರುವ ಪರಿವರ್ತನೆಗಳಾವುವು ?